

International Journal of Kannada Research
www.kannadajournal.com

ISSN: 2454–5813
IJSR 2017; 3(1): 86-88
© 2017 IJKS
www.kannadajournal.com
Received: 15-11-2016
Accepted: 16-12-2016

**ನಿಂಗನಾಯ್ಕ ಸಿ**
ಸಂಶೋಧನಾ ವಿದ್ಯಾರ್ಥಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು–570006

**Correspondence**
**ನಿಂಗನಾಯ್ಕ ಸಿ**
ಸಂಶೋಧನಾ ವಿದ್ಯಾರ್ಥಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು–570006

# ಆಗತ್ತೂರು ಗ್ರಾಮದಲ್ಲಿ ದೊರೆತ ವೀರಗಲ್ಲುಗಳು

**ನಿಂಗನಾಯ್ಕ ಸಿ**

ಕರ್ನಾಟಕ ರಾಜ್ಯದಲ್ಲಿರುವ ಸುಮಾರು 30 ಜಿಲ್ಲೆಗಳಲ್ಲಿ ಇದು ಒಂದಾಗಿದೆ. ಮೈಸೂರು ಜಿಲ್ಲೆಯು ಪ್ರಾಚೀನ ಕಾಲದಿಂದಲೂ ತನ್ನದೆ ಆದಂತ ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿ ಬೆಳಸಿಕೊಂಡು ಕಾಪಾಡಿಕೊಂಡು ಬಂದಿರುವಂತ ಜಿಲ್ಲೆಯಾಗಿದ್ದು ಐತಿಹಾಸಿಕ ಮತ್ತು ಸಾಂಸ್ಕೃತಿಕವಾಗಿ ಹೆಚ್ಚಿನ ಮಹತ್ವವನ್ನು ಪಡೆದುಕೊಂಡಿದೆ. ಹೆಗ್ಗಡದೇವನಕೋಟೆ ತಾಲೂಕಿನ ದಕ್ಷಿಣಕ್ಕೆ ಸುಮಾರು 18 ಕಿಲೋ ಮೀಟರ್ ಮತ್ತು ಕಬನಿ ಜಲಾಶಯದ ಪೂರ್ವಕ್ಕೆ 2 ಕಿಲೋ ಮೀಟರ್ ದೂರದಲ್ಲಿರುವ ಆಗತ್ತೂರು ಗ್ರಾಮವು ಐತಿಹಾಸಿಕ ಹಿನ್ನೆಲೆಯುಳ್ಳ ಸ್ಥಳವಾಗಿದೆ. ಪ್ರಸ್ತುತ ಈ ಗ್ರಾಮದಲ್ಲಿ ನಾನು ಸಂಶೋಧನಾ ಕ್ಷೇತ್ರಕಾರ್ಯ ನಿಮಿತ್ತಾ ಭೇಟಿ ನೀಡಿದ ಸಂದರ್ಭದಲ್ಲಿ ಸುಮಾರು 7 ವೀರಗಲ್ಲುಗಳು ಗೋಚರವಾಗಿದ್ದು, ಇವುಗಳು ಸುಮಾರು 11–16ನೇ ಶತಮಾನದ ಕಾಲಘಟ್ಟಕ್ಕೆ ಸರಿದಾವುಗಳಾಗಿವೇ ಅವುಗಳ ಸಂಪೂರ್ಣ ಮಾಹಿತಿಯನ್ನು ನಿರೂಪಿಸುವ ವಸ್ತು ವಿಷಯವೇ ಈ ಲೇಖನ.

**ವೀರಗಲ್ಲು–1 :–** ಈ ವೀರಗಲ್ಲು ಸುಮಾರು 3 ಅಡಿ ಎತ್ತರ, 2.5 ಅಡಿ ಅಗಲ, 5 ಇಂಚು ದಪ್ಪನಾಗಿದ್ದು ಮೂರು ಪಟ್ಟಿಕೆಗಳಿಂದ ಕೂಡಿದೆ. ಮೊದಲನೆ ಪಟ್ಟಿಕೆಯಲ್ಲಿ ಮೂರು ಜನ ವ್ಯಕ್ತಿಗಳಿದ್ದು ಪರಸ್ಪರ ಹೋರಾಡುತ್ತಿದ್ದು, ಕೈಗಳಲ್ಲಿ ಆಯುಧಗಳನ್ನು ಹಿಡಿದು ಒಬ್ಬ ವ್ಯಕ್ತಿಗೆ ಇಬ್ಬರು ಯೋಧರು ಹೊಡೆಯುತ್ತಿರುವ ದೃಶ್ಯ. ಎರಡನೇ ಪಟ್ಟಿಕೆಯಲ್ಲಿ ಯುದ್ಧದಲ್ಲಿ ಮಡಿದ ವೀರನನ್ನು ಇಬ್ಬರು ಚಾಮರಧಾರಿಣಿ ಕನ್ಯೆಯರು ದೇವಲೋಕಕ್ಕೆ ಕರೆದೊಯ್ಯುತ್ತಿರುವ ದೃಶ್ಯ. ಮೂರನೇ ಪಟ್ಟಿಕೆಯಲ್ಲಿ ಶಿವನಮೂರ್ತಿ ಶಿಲ್ಪವಿದೆ. ಶಿವನು ತ್ರಿಶೂಲ, ಢಮರುಗ, ಖಡ್ಗ, ಪಾಸಗಳನ್ನು ಹಿಡಿದಿದ್ದು ಈ ಮೂರ್ತಿಯ ಪಕ್ಕದಲ್ಲಿ ಇಬ್ಬರು ಚಾಮರಧಾರಣಿ ಭಕ್ತರು ಪೂಜೆಯನ್ನು ಸಲ್ಲಿಸುತ್ತಿರುವ ದೃಶ್ಯವಿದ್ದು ಇದೊಂದು ಶೈವಧರ್ಮದ ಪ್ರಾಬಲ್ಯ ಹೆಚ್ಚಾಗಿರುವುದನ್ನು ಕಾಣಬಹುದಾಗಿದೆ.

**ವೀರಗಲ್ಲು–2 :–** ಈ ವೀರಗಲ್ಲು ಸುಮಾರು 3 ಅಡಿ ಎತ್ತರ, 2.5 ಅಡಿ ಅಗಲ, 5 ಇಂಚು ದಪ್ಪನಾಗಿದ್ದು ಈ ವೀರಗಲ್ಲು ಮೂರು ಪಟ್ಟಿಕೆಗಳಿಂದ ಕೂಡಿದೆ. ಮೊದಲನೆ ಪಟ್ಟಿಕೆಯಲ್ಲಿ ಮೂರು ಜನ ವ್ಯಕ್ತಿಗಳು ಕತ್ತಿ, ಗುರಾಣಿ, ಈಟಿ ಇವುಗಳನ್ನು ಹಿಡಿದು ಪರಸ್ಪರ ವಿರುದ್ದ ದಿಕ್ಕಿನಲ್ಲಿ ಹೋರಾಡುತ್ತಿದ್ದು, ಎರಡನೇ ಪಟ್ಟಿಕೆಯಲ್ಲಿ ಯುದ್ದದಲ್ಲಿ ಮಡಿದ ವೀರನನ್ನು ಪಲ್ಲಕ್ಕಿಯ ಮೇಲೆ ಇರಿಸಿ ಇಬ್ಬರು ಚಾಮರಧಾರಿಣಿ ಕನ್ಯೆಯರು ಸ್ವರ್ಗಲೋಕಕ್ಕೆ ಕರೆದೊಯ್ಯುತ್ತಿರುವ ದೃಶ್ಯ. ವೈಷ್ಣವ ಧರ್ಮದ ಸಂಕೇತವನ್ನು ತಿಳಿಸುತ್ತದೆ. ಮೂರನೇ ಪಟ್ಟಿಕೆಯಲ್ಲಿ ಈ ಧರ್ಮ ವಾಹನವಾದ ಗರುಡವೀರಬೇಕಿತ್ತು ಆದರೆ ಕೊಳಲನ್ನು ಊದುತ್ತಿರುವ ತ್ರಿಭಂಗಿಯಲ್ಲಿ ನಿಂತಿರುವ ವೇಣುಗೋಪಾಲನ ಚಿತ್ರವಿರುವುದು ಒಂದು ವೈಶಿಷ್ಟ್ಯತೆ ಎನ್ನಬಹುದು, ಎಡಭಾಗದಲ್ಲಿ ಯತಿಯು ಗಣಪತಿಗೆ ಪೂಜೆಯನ್ನು ಸಲ್ಲಿಸುತ್ತಿರುವುದು, ಬಲಭಾಗದಲ್ಲಿ ಭಕ್ತನು ಕೈಮುಗಿದು ಕುಳಿತ್ತಿರುವ ದೃಶ್ಯ ಮನರಂಜಿಸುವಂತಹದು.

**ವೀರಗಲ್ಲು–3 :–** ಈ ವೀರಗಲ್ಲು ಸುಮಾರು 3 ಅಡಿ ಎತ್ತರ, 2.5 ಅಡಿ ಅಗಲ, 5 ಇಂಚು ದಪ್ಪನಾಗಿದ್ದು ಈ ವೀರಗಲ್ಲು ಮೂರು ಪಟ್ಟಿಕೆಗಳಿಂದ ಕೂಡಿದೆ. ಮೊದಲನೆ ಪಟ್ಟಿಕೆಯಲ್ಲಿ ಇಬ್ಬರು ವ್ಯಕ್ತಿಗಳು ಪರಸ್ಪರ ವಿರುದ್ದ ದಿಕ್ಕಿನಲ್ಲಿ ಆಯುಧಗಳಾದ ಕತ್ತಿ ಮತ್ತು ಗುರಾಣಿಯನ್ನು ಹಿಡಿದು ಹೋರಾಡುತ್ತಿದ್ದು, ಎರಡನೇ ಪಟ್ಟಿಕೆಯಲ್ಲಿ ಯುದ್ದದಲ್ಲಿ ಮಡಿದ ವೀರನನ್ನು ಇಬ್ಬರು ಚಾಮರಧಾರಿಣಿ ಕನ್ಯೆಯರು ಪಲ್ಲಕ್ಕಿಯ ಮೇಲೆ ಇರಿಸಿ ಸ್ವರ್ಗಲೋಕಕ್ಕೆ ಕರೆದೊಯ್ಯುತ್ತಿರುವ ದೃಶ್ಯ. ಮೂರನೇ ಪಟ್ಟಿಕೆಯಲ್ಲಿ ಕೊಳಲನ್ನು ಊದುತ್ತಿರುವ ತ್ರಿಭಂಗಿಯಲ್ಲಿ ನಿಂತಿರುವ ವೇಣುಗೋಪಾಲನ ಚಿತ್ರವಿದ್ದು, ಪಕ್ಕದಲ್ಲಿ ಗಣಪತಿಯ ಉಬ್ಬುಶಿಲ್ಪದ ಕೆತ್ತನೆ ಇದ್ದು, ಎರಡು ವಿಗ್ರಹಗಳಿಗೆ ಯತಿಯು ಪೂಜಾ ಕೈಂಕರ್ಯಗಳನ್ನು ನೆರವೇರುಸುತ್ತಿದ್ದು, ಬಲಭಾಗದಲ್ಲಿ ಭಕ್ತನು ಕೈಮುಗಿದು ಕುಳಿತ್ತಿರುವುದು ಕಂಡು ಬರುತ್ತದೆ. ಇದರಿಂದ ಇದೊಂದು ವೈಷ್ಣವ ಸಂಸ್ಕಾರದ ಪ್ರತೀಕವಾಗಿದ್ದು ಅತ್ಯಂತ ಹೆಚ್ಚಿನ ಮಹತ್ವವನ್ನು ಹೊಂದಿದೆ.

**ವೀರಗಲ್ಲು –4 :–** ಈ ವೀರಗಲ್ಲು ಸುಮಾರು 4 ಅಡಿ ಎತ್ತರ, 3 ಅಡಿ ಅಗಲ, 5 ಇಂಚು ದಪ್ಪನಾಗಿದ್ದು ಮೂರು ಪಟ್ಟಿಕೆಗಳಿಂದ ಕೂಡಿದೆ. ಮೊದಲನೆ ಪಟ್ಟಿಕೆಯಲ್ಲಿ ಇಬ್ಬರು ವ್ಯಕ್ತಿಗಳು ಪರಸ್ಪರ ವಿರುದ್ಧ ದಿಕ್ಕಿನಲ್ಲಿ ಹೊರಾಡುತ್ತಿರುವುದು. ಬಿಲ್ಲು ಬಾಣವನ್ನು ಹಿಡಿದು ಹೊರಾಡುತ್ತಿರುವುದು ಈತನ ಹಿಂಭಾಗದಲ್ಲಿ ಒಬ್ಬ ಸೈನಿಕನು ಕತ್ತಿಯನ್ನು ಹಿಡಿದು ಹೊಡೆಯುತ್ತಿರುವ ದೃಶ್ಯ ಅತ್ಯಂತ ಮನೋಹಕವಾಗಿದ್ದು ಈ ಯುದ್ಧದಲ್ಲಿ ಮಡಿದ ವೀರನನ್ನು ಚಾಮರಧಾರಿಣಿ ಕನ್ಯೆಯರು ಪಲ್ಲಕ್ಕಿಯ ಸಮೇತರಾಗಿ ಆಯುಧೋಪಕರಣಗಳನ್ನು ಹಿಡಿದು ದೇವಲೋಕಕ್ಕೆ ಕರೆದೊಯ್ಯುತ್ತಿರುವ ದೃಶ್ಯ. ಮೂರನೆಯ ಪಟ್ಟಿಕೆಯಲ್ಲಿ ಶಿವಲಿಂಗವಿದ್ದು, ಶಿವಲಿಂಗಕ್ಕೆ ಯತಿಯು ಪೂಜ ಕೈಂಕರ್ಯಗಳನ್ನು ನೆರವೇರಿಸುತ್ತಿದ್ದು, ಇವರ ಹಿಂಭಾಗದಲ್ಲಿ ನಂದಿಯ ಉಬ್ಬು ಶಿಲ್ಪದ ಕೆತ್ತನೆಯಿದೆ. ಬಲಭಾಗದಲ್ಲಿ ಇಬ್ಬರು ಭಕ್ತರು ಕೈಮುಗಿದು ಕುಳಿತ್ತಿರುವುದು, ಇದರಿಂದಾಗಿ ಇದೊಂದು ಶೈವ ಸಂಸ್ಕಾರವನ್ನು ಸಾರುವ ವೀರಗಲ್ಲಾಗಿದ್ದು, ಮೇಲ್ಭಾವಣಿ ಪ್ರಭಾವಳಿಯನ್ನು ಹೊಂದಿದ್ದು, ಮೇಲ್ಭಾಗದಲ್ಲಿ ಸೂರ್ಯ,ಚಂದ್ರರ ಉಬ್ಬು ಶಿಲ್ಪದ ಚಿತ್ರಣವನ್ನು ಕೆತ್ತಲಾಗಿದೆ.

**ವೀರಗಲ್ಲು–5 :–** ಈ ವೀರಗಲ್ಲು ಸುಮಾರು 4 ಅಡಿ ಎತ್ತರ, 3 ಅಡಿ ಅಗಲ, 5 ಇಂಚು ದಪ್ಪನಾಗಿದ್ದು ಈ ವೀರಗಲ್ಲು ಮೂರು ಪಟ್ಟಿಕೆಗಳಿಂದ ಕೂಡಿದೆ. ಮೊದಲನೆ ಪಟ್ಟಿಕೆಯಲ್ಲಿ ನಾಲ್ಕು ಜನ ವ್ಯಕ್ತಿಗಳಿದ್ದು, ಅದರ ಎರಡು ಭಾಗದಲ್ಲಿ ಇಬ್ಬರಿಬ್ಬರು ವ್ಯಕ್ತಿಗಳು ಆಯುಧಗಳಾದ ಕತ್ತಿ, ಗುರಾಣಿ, ಹಿಡಿದು ಪರಸ್ಪರ ವಿರುದ್ಧ ದಿಕ್ಕಿನಲ್ಲಿ ಹೋರಾಡುತ್ತಿದ್ದು, ಈ ವೀರರು ವಸ್ತ್ರಧಾರಿಯಾಗಿದ್ದು ಪಂಚೆಯನ್ನು ಕಚ್ಚೆಯಂತೆ ಧರಿಸಿದ್ದು, ಕೇಶವನ್ನು ಮುಡಿಯಂತೆ ಕಟ್ಟಿದ್ದು, ಕೈಯಲ್ಲಿ ಕೈಕಡಗ, ಕಾಲಲ್ಲಿ ಕಾಲ್‌ಬಂಧಿ ಧರಿಸಿದ್ದು, ದಪ್ಪನೆ ಮೀಸೆ ಹೊಂದಿದ್ದು ಬಹುಶಃ ರಾಜನೇ ಇರುವಂತ ಪ್ರಶ್ನೆ ನಮ್ಮದು. ಎರಡನೇ ಪಟ್ಟಿಕೆಯಲ್ಲಿ ಯುದ್ಧದಲ್ಲಿ ಮಡಿದ ಇಬ್ಬರು ವೀರರು ಪರಸ್ಪರ ಕೈಗಳನ್ನು ಹಿಡಿದಿದ್ದು ಕಂಡು ಬಂದಿದ್ದು ಈ ವೀರರು ವಜ್ರವೈಢೂರ್ಯವನ್ನು ಧರಿಸಿ ಅಲಂಕಾರಭರಿತ ವಸ್ತ್ರವಿನ್ಯಾಸಧರಿಸಿ ಆಯುಧೋಪಕರಣ ಹಾಗೂ ಚಾಮರಧಾರಿಣಿಯಾದ ದೇವಕನ್ಯೆಯರು ಈ ಇಬ್ಬರು ವೀರರನ್ನು ಸ್ವರ್ಗಲೋಕಕ್ಕೆ ಕರೆದೊಯ್ಯುತ್ತಿರುವ ದೃಶ್ಯ. ಮೂರನೇ ಪಟ್ಟಿಕೆಯಲ್ಲಿ ಪ್ರಭಾವಳಿಯಲ್ಲಿ ಪ್ರತಿಷ್ಠಾಪಿಸಲಾದ ಶಿವಲಿಂಗವು ಇದ್ದು, ಈ ಶಿವಲಿಂಗಕ್ಕೆ ಎಡಭಾಗದಲ್ಲಿ ಯತಿಯು ಪೂಜಾಕಾರ್ಯವನ್ನು ನೆರವೇರಿಸುತ್ತಿದ್ದು ಈತನ ಹಿಂಭಾಗದಲ್ಲಿ ನಂದಿ ಶಿಲ್ಪವಿದ್ದು ಬಲಭಾಗದಲ್ಲಿ ಮೂರು ಜನ ಭಕ್ತರು ಕೈಮುಗಿದು ನಿಂತಿರುವುದು ದೃಶ್ಯ, ಮೇಲ್ಭಾಗದಲ್ಲಿ ಸೂರ್ಯ, ಚಂದ್ರರ ಉಬ್ಬು ಶಿಲ್ಪ ಕೆತ್ತನೆ ಇದ್ದು ಪ್ರಸ್ತುತ ಇದಕ್ಕೆ ಸ್ಥಳೀಯ ಗ್ರಾಮಸ್ಥರು ಸುಣ್ಣವನ್ನು ಲೇಪಿಸಿದ್ದು ಹಬ್ಬಅರಿದಿನಗಳಲ್ಲಿ ಎಣ್ಣೆಯನ್ನು ಸುರಿದಿರುವುದನ್ನು ಬಲಭಾಗದಲ್ಲಿ ಭಕ್ತನು ಕೈಮುಗಿದು ಕುಳಿತ್ತಿರುವ ದೃಶ್ಯ ಬಂದಿದೆ.

**ವೀರಗಲ್ಲು–6 :–** ಈ ವೀರಗಲ್ಲು ಸುಮಾರು 4 ಅಡಿ ಎತ್ತರ, 4 ಅಡಿ ಅಗಲ, 6 ಇಂಚು ದಪ್ಪನಾಗಿದ್ದು ಗ್ರಾನೈಟ್ ಕಲ್ಲಿನಿಂದ ಆಗಿದ್ದು, ಮೂರು ಹಂತಗಳಿಂದ ಕೂಡಿದೆ. ಮೊದಲನೇ ಹಂತದಲ್ಲಿ ನಾಲ್ಕು ಜನ ವ್ಯಕ್ತಿಗಳಿದ್ದು ಅದರ ಎರಡು ಭಾಗದಲ್ಲಿ ಇಬ್ಬರಿಬ್ಬರು ವ್ಯಕ್ತಿಗಳು ಕತ್ತಿ, ಗುರಾಣೆಯನ್ನು ಹಿಡಿದು ಪರಸ್ಪರ ವಿರುದ್ಧ ದಿಕ್ಕಿನಲ್ಲಿ ಹೊರಾಡುತ್ತಿದ್ದು, ಈ ವೀರನು ವಸ್ತ್ರಧಾರಿಯಾಗಿದ್ದು ದಷ್ಟ ಪುಷ್ಟವಾದ ಮೈಕಟ್ಟನ್ನು ಹೊಂದಿದ್ದಾರೆ. ಇವರು ಸೊಂಟದಲ್ಲಿ ಪಂಚೆಯನ್ನು ಕಚ್ಚೆಯಂತೆ ಧರಿಸಿದ್ದು, ಕೇಶವನ್ನು ಮುಡಿಯಂತೆ ಕಟ್ಟಿದ್ದು, ಕೈಯಲ್ಲಿ ಕೈ ಕಡಗ, ಕಾಲಲ್ಲಿ ಕಾಲ್‌ಬಂಧಿ, ದಪ್ಪನೆಯ ಮೀಸೆಯನ್ನು ಹೋದಿದ್ದು ಬಹುಶಃ ರಾಜರೇ ಇವರಿಬೇಕು ಎಂಬ ಪ್ರಶ್ನೆ ನಮ್ಮದು. ಎರಡನೇ ಪಟ್ಟಿಕೆಯಲ್ಲಿ ಈ ಯುದ್ಧದಲ್ಲಿ ಮಡಿದ ಇಬ್ಬರು ವೀರರನ್ನು ವಜ್ರವೈಢುರ್ಯಗಳನ್ನು ಧರಿಸಿ ಅಲಂಕಾರಭರಿತ ವಸ್ತ್ರವಿನ್ಯಾಸವನ್ನು ಧರಿಸಿ ಆಯುಧೋಪಕರಣ ಹಾಗೂ ಚಾಮರಿಧಾರಣಿಯಾದ ದೇವ ಕನ್ಯೆಯರು ಈ ವೀರರನ್ನು ಸ್ವರ್ಗಲೋಕಕ್ಕೆ ಕರೆದೊಯುತ್ತಿರುವ ದೃಶ್ಯ. ಮೂರನೇ ಪಟ್ಟಿಕೆಯಲ್ಲಿ ಪ್ರಭಾವಳಿಯಲ್ಲಿ ಪ್ರತಿಷ್ಠಾಪಿಸಲಾದ ಶಿವಲಿಂಗವಿದ್ದು, ಈ ಶಿವಲಿಂಗಕ್ಕೆ ಬಲಭಾಗದಲ್ಲಿ ಯತಿಯು ಪೂಜಾ ಕಾರ್ಯವನ್ನು ನೆರವೇರಿಸುತ್ತಿದ್ದು, ಈತನ ಹಿಂಭಾಗದಲ್ಲಿ ನಂದಿ ಶಿಲ್ಪವಿದ್ದು, ಬಲಭಾಗದಲ್ಲಿ ಇಬ್ಬರು ಭಕ್ತರು ಕೈಮುಗಿದು ನಿಂತಿರುವ ದೃಶ್ಯ, ಮೇಲ್ಭಾಗದಲ್ಲಿ ಸೂರ್ಯ ಚಂದ್ರರ ಉಬ್ಬು ಶಿಲ್ಪದ ಕೆತ್ತನೆಯನ್ನು ಕೆತ್ತಲಾಗಿದ್ದು, ಪ್ರಸ್ತುತ ಸ್ಥಳೀಯ ಗ್ರಾಮಸ್ಥರು ಸುಣ್ಣವನ್ನು ಲೇಪಿಸಿದ್ದಾರೆ. ಈ ವೀರಗಲ್ಲು ಮೂರು ಹಂತವನ್ನು ಸುತ್ತುವರಿದಂತೆ ಪ್ರಭಾವಳಿಯನ್ನು ಕೆತ್ತಲಾಗಿದೆ.

**ಶಾಸನೋಕ್ತ ವೀರಗಲ್ಲು:–**

ಈ ವೀರಗಲ್ಲು ಸುಮಾರು 2 ಅಡಿ ಎತ್ತರ, 3 ಅಡಿ ಅಗಲವಾಗಿದ್ದು, ಮೊದಲನೇ ಪಟ್ಟಿಕೆಯಲ್ಲಿ ಇಬ್ಬರು ವೀರರು ಹೊರಾಡುತ್ತಿರುವ ದೃಶ್ಯ. ಎರಡನೇ ಪಟ್ಟಿಕೆಯಲ್ಲಿ ಈ ಯುದ್ಧದಲ್ಲಿ ಮಡಿದ ವ್ಯಕ್ತಿಯನ್ನು ಇಬ್ಬರು ದೇವ ಕನ್ಯೆಯರು ಸ್ವರ್ಗಲೋಕಕ್ಕೆ ಕರೆದೊಯುತ್ತಿರುವ ದೃಶ್ಯ ಕಂಡು ಬಂದಿದ್ದು ಇದೊಂದು ಶಾಸನೋಕ್ತ ವೀರಗಲ್ಲಾಗಿದ್ದು ಶಾಸನದಲ್ಲಿ ಶಾಸನ ಸಂಪೂರ್ಣವಾಗಿ ತ್ರುಟಿತವಾಗಿದ್ದು ಕಾಲದ ಉಲ್ಲೇಖ ಲಭ್ಯವಿಲ್ಲ.

ಈ ಮೇಲೆ ತಿಳಿಸಿದ ವೀರಗಲ್ಲುಗಳನ್ನು ಗಮನಿಸಿದಾಗ ಸಾಮಾಜಿಕ ಬದುಕಿನಲ್ಲಿ ಮಾನವನ ಜೀವನ ರಾಜಮಹಾರಾಜರ ಆಡಳಿತದ ಸನ್ನಿವೇಶದಲ್ಲಿ ವೈಷ್ಣವ, ಶೈವ ಎರಡು ಸಂಸ್ಕೃತಿಗಳ ಧಾರ್ಮಿಕ ಸಾಮರಸ್ಯವನ್ನು ನಿರೂಪಿಸುವಂತಹ ಸಾದೃಶ್ಯಗಳು ಈ ವೀರಗಲ್ಲುಗಳಲ್ಲಿ ನಿರೂಪಿತವಾಗಿರುವುದು ನಿಜಕ್ಕೂ ಶ್ಲಾಘನೀಯ ಎಂಬ ಭಾವನೆ ನನ್ನದ್ದು. ಆದರೆ ಇವುಗಳ ಸಂಶೋಧನಾತ್ಮಕ ಅಧ್ಯಯನ ನಡೆದರೆ ಮುಂದಿನ ಪೀಳಿಗೆಗೆ ಉಪಯೋಕ್ತ ಮಾಹಿತಿಯನ್ನು ನೀಡಬಹುದು.



1. ವೀರಗಲ್ಲು



2. ವೀರಗಲ್ಲು



3. ವೀರಗಲ್ಲು



4. ವೀರಗಲ್ಲು



5. ವೀರಗಲ್ಲು



6. ವೀರಗಲ್ಲು



7. ಶಾಸನೋಕ್ತ ವೀರಗಲ್ಲು

**ಅಡಿ ಟಿಪ್ಪಣಿಗಳು**


1. ಸೂರ್ಯನಾಥ ಕಾಮತ್ ಯು (ಸಂ) ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಭಾಗ–1, ಕರ್ನಾಟಕ ಸರ್ಕಾರ, ಬೆಂಗಳೂರು–1984
2. ಎಪಿಗ್ರಾಫಿಯ ಕರ್ನಾಟಿಕ ಸಂಪುಟ–3, ಪ್ರಸಾರಾಂಗ, ಮೈ.ವಿ.ವಿ.ಮೈಸೂರು.
3. ಕನ್ನಡ ವಿಷಯ ವಿಶ್ವಕೋಶ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–2005
4. ಚಿದಾನಂದಮೂರ್ತಿ,ಎಂ– ಕನ್ನಡ ಶಾಸನಗಳ ಸಂಸ್ಕೃತಿಕ ಅಧ್ಯಯನ,ಬೆಂಗಳೂರು–2002
5. ಶೇಷಶಾಸ್ತ್ರಿ, ಆರ್– ಕರ್ನಾಟಕದ ವೀರಗಲ್ಲುಗಳು, ಕನ್ನಡ ಸಾಹಿತ್ಯ ಪರಿಷತ್ತು,ಬೆಂಗಳೂರು–2010.
6. ತಿಪ್ಪೆರುದ್ರಸ್ವಾಮಿ, ಹೆಚ್– ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಮೈಸೂರು–2010
7. ಪರಶಿವಮೂರ್ತಿ. ಡಿ.ವಿ– ಕನ್ನಡ ಶಾಸನ ಶಿಲ್ಪ,ಕನ್ನಡ ವಿಶ್ವವಿದ್ಯಾನಿಲಯ, ಹಂಪಿ–1999.
8. ಫೋಟೋದಲ್ಲಿನ ಚಿತ್ರವನ್ನು ಗಮನಿಸಿ, ಚಿತ್ರ ಸಂಖ್ಯೆ–1 ರಿಂದ 6.